## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 20-12-2022

### ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 182/2022 ಕಲಂ 379 ಐಪಿಸಿ:-

ದಿನಾಂಕಃ 19/12/2022 ರಂದು ಸಾಯಂಕಾಲ 18ಃ00 ಗಂಟೆಗೆ ಫಿರ್ಯಾದಿ ಶ್ರೀ ಗಣೇಶ ತಂದೆ ತಾಯಪ್ಪಾ ದಾಂಡೇಕರ್ ವಯಃ 30 ವರ್ಷ ಜಾತಿಃ ವಡ್ಡರ್ ಉಃ ಡ್ರೈÊವರ ಸಾಃ ಮುಸ್ತಾಪೂರ್ ತಾಃ ಹುಮನಾಬಾದ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನAದರೆ, ದಿನಾಂಕಃ 19/12/2022 ರಂದು ಮುಂಜಾನೆ 11ಃ00 ಗಂಟೆಗೆ ಫರ್ಯಾದಿಯು ಹಾಗೂ ಇವರ ಭಾವನಾದ ಶ್ರೀ ರಾಜು ತಂದೆ ಶ್ಯಾಮರಾವ್ ಇಬ್ಬರು ಕೂಡಿಕೊಂಡು ಅಣ್ಣನಾದ ಹಣಮಂತ ಇವರ ಟಾಟಾ ವಿಸ್ಟಾ ಕಾರ ನಂಃ ಕೆಎ-36 ಎಮ್-6014 ನೇದನ್ನು ತೆಗೆದುಕೊಂಡು ಹುಮನಾಬಾದಗೆ 11ಃ20 ಗಂಟೆಗೆ ಬಂದು, ಎಚ್‍ಡಿಎಫ್ ಸಿ ಬ್ಯಾಂಕ್ ಮುಂದುಗಡೆ ರೋಡಿನ ಪಕ್ಕದಲ್ಲಿ ಕಾರ ನಿಲ್ಲಿಸಿ, ಎಚ್‍ಡಿಎಫ್‍ಸಿ ಬ್ಯಾಂಕಿಗೆ ಹೋಗಿ ಅಕೌಂಟನಿAದ 150000=00 ರೂಪಾಯಿಗಳು ಹಾಗೂ ಭಾವನಾದ ರಾಜು ಇತನ ಅಕೌಂಟನಿAದ 180000=00 ರುಪಾಯಿಗಳು ಹೀಗೆ ಒಟ್ಟು 3,30,000=00 ರೂಪಾಯಿಗಳು ತೆಗೆದುಕೊಂಡು ಒಂದು ಕೈಚೀಲದಲ್ಲಿ ಹಾಕಿ, ಅದನ್ನು ನಮ್ಮ ಕಾರಿನ ಡ್ಯಾಸ್ ಬೋರ್ಡನಲ್ಲಿ ಇಟ್ಟುಕೊಂಡು, 12ಃ30 ಗಂಟೆಗೆ ಬ್ಯಾಂಕ್ ಮುಂದಿನಿAದ ಕಾರ ತೆಗೆದುಕೊಂಡು ಗಾದಾ ಪೆಟ್ರೋಲ್ ಪಂಪ್ ಪಕ್ಕದಲ್ಲಿ ಇರುವ ಗ್ಯಾರೇಜ್ ಮುಂದುಗಡೆ ರೋಡಿನ ಪಕ್ಕದಲ್ಲಿ ನಿಲ್ಲಿಸಿ, ಐಬಿ ಕ್ರಾಸ್ ಕಡೆಗೆ ಹೋಗಿ, ಅಲ್ಲಿ ನಮ್ಮ ಖಾಸಗಿ ಕೆಲಸ ಮುಗಿಸಿಕೊಂಡು ಮರಳಿ 13ಃ30 ಗಂಟೆಗೆ ನೋಡಿದಾಗ ನಿಲ್ಲಿಸಿದ ಕಾರ ಕಡೆಗೆ ಬಂದು ನೋಡಲು ಕಾರಿನ ಡ್ರೈÊವರ ಪಕ್ಕದ ಗ್ಲಾಸ್ ಒಡೆದು ಹೋಗಿದ್ದು, ಗಾಬರಿಗೊಂಡು ಕಾರಿನ ಡೋರಿನ ಲಾಕ್ ತೆಗೆದು ಕಾರಿನಲ್ಲಿಟ್ಟಿದ ಹಣದ ಕೈಚೀಲವನ್ನು ನೋಡಲು, ಕೈಚೀಲ ಮತ್ತು ಅದರಲ್ಲಿನ ನಗದು ಹಣ 3,30,000=00 ರೂಪಾಯಿಗಳು ಇದ್ದಿರುವುದಿಲ್ಲಾ. ಅಕ್ಕ-ಪಕ್ಕದ ಅಂಗಡಿಯವರಿಗೆ ವಿಚಾರಿಸಲು, ಕಳವು ಮಾಡಿಕೊಂಡು ಹೋದವರ ಬಗ್ಗೆ ಯಾವುದೇ ಸುಳಿವು ಸಿಕ್ಕಿರುವುದಿಲ್ಲಾ. ದಿನಾಂಕಃ 19/12/2022 ರಂದು ಮಧ್ಯಾಹ್ನ 12ಃ30 ಗಂಟೆಯಿAದ 13ಃ30 ಗಂಟೆಯ ಮಧ್ಯೆದ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಕಾರಿನ ಗ್ಲಾಸ್ ಒಡೆದು ಕಾರಿನಲ್ಲಿಟ್ಟಿದ ನಗದು ಹಣ 3,30,000=00 ರೂಪಾಯಿಗಳು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.